# 2013-14ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದ ಅಂಶಗಳ ಮೇಲೆ ತೆಗೆದುಕೊಂಡ ಕ್ರಮದ ಕುರಿತು ವರದಿ

## ಇಲಾಖೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

| ಕಂಡಿಕೆ ಸಂಖ್ಯೆ | ಘೋಷಣೆ | ತೆಗೆದುಕೊಂಡ ಕ್ರಮ |
|---|---|---|
| 227 | ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳಿಗೆ ನೀಡುತ್ತಿರುವ ಆವರ್ತ ನಿಧಿಯ ಮಿತಿಯನ್ನು 5,000 ರೂಗಳಿಂದ 25,000 ರೂ. ಗಳಿಗೆ ಹಂತ ಹಂತವಾಗಿ ಹೆಚ್ಚಿಸಲಾಗುವುದು. | ಸರ್ಕಾರದ ಆದೇಶ ಸಂಖ್ಯೆ:ಮಮಇ/129/ಮಮಅ/2013, ದಿ:03-09-13ರಲ್ಲಿ **(ಆದೇಶ ಪ್ರತಿ ಲಗತ್ತಿಸಿದೆ)** ಸದರಿ ಯೋಜನೆಯನ್ನು 2014-15ನೇ ಸಾಲಿನಿಂದ ಜಾರಿಗೊಳಿಸಿ 2017-18ನೇ ಸಾಲಿನ ವರೆಗೆ ಪ್ರತಿ ವರ್ಷ ರೂ. 5,000/-ದಂತೆ ಹಂತ ಹಂತವಾಗಿ ಹೆಚ್ಚಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಪ್ರಸ್ತುತ ರಾಜ್ಯದಲ್ಲಿ 1.40 ಲಕ್ಷ ಸ್ವಸಹಾಯ ಗುಂಪುಗಳ ಆಸ್ತಿತ್ವದಲ್ಲಿದೆ. |
| 228 | ಎಲ್ಲಾ ಅಂಗನವಾಡಿ ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರದೊಡನೆ ಹಾಲನ್ನು ಕೂಡ ಸರಬರಾಜು ಮಾಡಲಾಗುವುದು. | ಸಂಖ್ಯೆ: ಮಮಇ/365/ಐಸಿಡಿ/2013, ದಿ: 13-08-13ರಲ್ಲಿ ಆದೇಶ ಹೊರಡಿಸಲಾಗಿದೆ. ಸದರಿ ಕಾರ್ಯಕ್ರಮದಡಿ 3959721 ಫಲಾನುಭವಿಗಳು ಸೌಲಭ್ಯವನ್ನು ಪಡೆಯುತ್ತಿದ್ದಾರೆ. |
| 229 | ಐ.ಸಿ.ಡಿ.ಎಸ್. ಯೋಜನೆಯಡಿ ಅಂಗನವಾಡಿ ಕಾರ್ಯಕರ್ತರು ಹಾಗೂ ಸಹಾಯಕಿಯರಿಗೆ ನೀಡುತ್ತಿರುವ ಗೌರವಧನವನ್ನು ಕ್ರಮವಾಗಿ 500 ರೂ. ಹಾಗೂ 250 ರೂ.ಗಳಿಗೆ ಹೆಚ್ಚಿಸಲಾಗುವುದು. | ಸಂಖ್ಯೆ: ಮಮಇ/190/ಐಸಿಡಿ/2013, ದಿ: 19-08-13ರಲ್ಲಿ ಆದೇಶ ಹೊರಡಿಸಲಾಗಿದೆ. |

# 2014-15ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ರೂಪಿಸಿದ ಯೋಜನೆಗಳು ಹಾಗೂ ಅವುಗಳ ಅನುಷ್ಠಾನ ಕುರಿತು ಮಾಹಿತಿ

<table>
<tr><th>2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿನ ಕಂಡಿಕೆ ಸಂಖ್ಯೆ ಮತ್ತು ವಿವರ</th><th>ಅನುಷ್ಠಾನದ ವಿವರ</th></tr>
<tr><td>ಕಂಡಿಕೆ ಸಂಖ್ಯೆ: 149 – ಅಂಗನವಾಡಿ ಕಾರ್ಯಕರ್ತರು ಹಾಗೂ ಸಹಾಯಕಿಯರಿಗೆ ನೀಡಲಾಗುತ್ತಿರುವ ಗೌರವಧನದಲ್ಲಿ ಕ್ರಮವಾಗಿ ತಲಾ 500 ರೂ.ಗಳು ಹಾಗೂ 250 ರೂ.ಗಳಂತೆ ಹೆಚ್ಚಳ ಮಾಡಲಾಗುವುದು.</td><td>ಅಂಗನವಾಡಿ ಕಾರ್ಯಕರ್ತೆಯರಿಗೆ/ಅಂಗನವಾಡಿ ಸಹಾಯಕಿಯರಿಗೆ ಗೌರವ ಧನ ಹೆಚ್ಚಳ ಮಾಡಿದ ಸರ್ಕಾರದ ಆದೇಶ ಸಂಖ್ಯೆ: ಮಮಇ/82/ ಐಸಿಡಿ/2014, ದಿನಾಂಕ:27-05-2014ರಲ್ಲಿ ಮಂಜೂರಾತಿ ದೊರೆತಿದೆ.</td></tr>
<tr><td>ಕಂಡಿಕೆ ಸಂಖ್ಯೆ: 150 – ಮಹಿಳಾ ವಿಶೇಷ ಚಿಕಿತ್ಸಾ ಘಟಕಗಳು, ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ಸಮಗ್ರ ಸೌಲಭ್ಯ ಅಂದರೆ, ವೈದ್ಯಕೀಯ ಚಿಕಿತ್ಸೆ ಮತ್ತು ನೆರವು, ಪೋಲೀಸ್ ನೆರವು, ಕಾನೂನು ನೆರವು ಹಾಗೂ ಸಮಾಲೋಚನೆ ವ್ಯವಸ್ಥೆಗಳನ್ನು ಒದಗಿಸಲಿವೆ. ಇಂತಹ ಕೇಂದ್ರಗಳನ್ನು ರಾಜ್ಯದ 30 ಜಿಲ್ಲಾ ಆಸ್ಪತ್ರೆಗಳಲ್ಲಿ ಹಾಗೂ ಬೆಂಗಳೂರು ಮಹಾನಗರದಲ್ಲಿ 5 ಪ್ರತಿಷ್ಠಿತ ಸರ್ಕಾರಿ ಹಾಗೂ ಎಲ್ಲಾ ಸೌಲಭ್ಯವಿರುವ ಆಸ್ಪತ್ರೆಗಳಾದ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಕೆ.ಸಿ. ಜನರಲ್ ಆಸ್ಪತ್ರೆ, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ನಿಮ್ಹಾನ್ಸ್ ಆಸ್ಪತ್ರೆ, ಜಯದೇವ ಆಸ್ಪತ್ರೆ, ಹೀಗೆ ಒಟ್ಟು 35 ಮಹಿಳಾ ವಿಶೇಷ ಚಿಕಿತ್ಸಾ ಘಟಕಗಳನ್ನು ಸ್ಥಾಪಿಸಲಾಗುವುದು.</td><td>ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ವೈದ್ಯಕೀಯ ಚಿಕಿತ್ಸೆ ಮತ್ತು ನೆರವು, ಪೊಲೀಸ್ ನೆರವು, ಕಾನೂನು ನೆರವು, ಸಮಾಲೋಚನೆ ವ್ಯವಸ್ಥೆಗಳನ್ನು ಒದಗಿಸುವ "ಮಹಿಳಾ ವಿಶೇಷ ಚಿಕಿತ್ಸಾ ಘಟಕ"ಗಳನ್ನು ದಿನಾಂಕ:01-11-2014 ರಂದು ರಾಜ್ಯದ ಎಲ್ಲಾ 30 ಜಿಲ್ಲಾ ಆಸ್ಪತ್ರೆಗಳಲ್ಲಿ ಹಾಗೂ ಬೆಂಗಳೂರಿನ ಬೌರಿಂಗ್ ಲೇಡಿ ಕರ್ಜನ್ ಆಸ್ಪತ್ರೆ, ಕೆ.ಸಿ.ಜನರಲ್ ಆಸ್ಪತ್ರೆ, ವಾಣಿವಿಲಾಸ ಆಸ್ಪತ್ರೆಗಳಲ್ಲಿ ಪ್ರಾರಂಭಿಸಲಾಗಿದೆ. ಚಿಕಿತ್ಸಾ ಘಟಕಗಳಲ್ಲಿ ಸಿಬ್ಬಂದಿಗಳನ್ನು ಈ ಕೆಳಕಂಡಂತೆ ನಿಯೋಜಿಸಲಾಗಿದೆ.
<table>
<tr><th>ನಿಯೋಜನೆ ಮೇಲೆ</th><th>ಗೌರವಧನ ಆಧಾರದ ಮೇಲೆ</th></tr>
<tr><td>ವೈದ್ಯಾಧಿಕಾರಿಗಳು-2<br>ಮಹಿಳಾ ಪೊಲೀಸ್ ಅಧಿಕಾರಿ-1<br>ನರ್ಸ್‌ಗಳು-4<br>ಕಾನೂನು ಸಲಹೆಗಾರರು-2</td><td>ಸಮಾಲೋಚಕರು-1<br>ಸಮಾಜ ಸೇವಾ ಕಾರ್ಯಕರ್ತರು-3<br>ಸ್ವೀಪರ್/ಕ್ಲೀನರ್-2</td></tr>
</table>
ಘಟಕಗಳು ದಿನಾಂಕ:01-11-2014 ರಿಂದ ಕಾರ್ಯಾರಂಭ ಗೊಂಡಿರುತ್ತದೆ.<br>ಘಟಕಗಳ ಅನುಷ್ಠಾನಕ್ಕಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿ ರಚಿಸಲಾಗಿದ್ದು ಸಮಿತಿಯ ಮೂಲಕ ಘಟಕದ ಕರ್ತವ್ಯಗಳ ಉಸ್ತುವಾರಿ ನೋಡಿಕೊಳ್ಳಲಾಗುವುದು.</td></tr>
<tr><td>ಕಂಡಿಕೆ ಸಂಖ್ಯೆ: 151 – ಕರ್ನಾಟಕದಲ್ಲಿ ಇರುವ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಸಾಮಾನ್ಯ</td><td>ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಸಾಮಾನ್ಯ ಗ್ರಾಮ ಸಭೆಗಳನ್ನು ನಡೆಸುತ್ತಿರುವ</td></tr>
</table>

| | |
|---|---|
| ಗ್ರಾಮ ಸಭೆಗಳನ್ನು ನಡೆಸುತ್ತಿದ್ದು, ಈ ಮಾದರಿಯಲ್ಲಿ ಪ್ರತ್ಯೇಕವಾಗಿ ಮಹಿಳೆಯರಿಗೆ ಅವರ ಸವಲತ್ತುಗಳನ್ನು ಪಡೆದುಕೊಳ್ಳಲು ಹಾಗೂ ವಿವಿಧ ಅಭಿವೃದ್ಧಿ ಇಲಾಖೆಗಳ ಯೋಜನೆಯಲ್ಲಿ ಸೂಕ್ತ ಮಹಿಳಾ ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಕೂಲವಾಗುವ ನಿಟ್ಟಿನಲ್ಲಿ ವಿಶೇಷ ಗ್ರಾಮಸಭೆಗಳನ್ನು ನಡೆಸಲು ಅವಕಾಶ ಕಲ್ಪಿಸಲಾಗುವುದು. | ಮಾದರಿಯಲ್ಲಿ ಮಹಿಳೆಯರು ಅವರ ಸವಲತ್ತುಗಳನ್ನು ನಿಯತವಾಗಿ ಪಡೆದುಕೊಳ್ಳಲು ಹಾಗೂ ವಿವಿಧ ಅಭಿವೃದ್ಧಿ ಇಲಾಖೆಗಳ ಯೋಜನೆಗಳಲ್ಲಿ ಸೂಕ್ತ ಮಹಿಳಾ ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಕೂಲವಾಗುವ ದೃಷ್ಠಿಯಿಂದ ವಿಶೇಷ ಗ್ರಾಮ ಸಭೆಗಳನ್ನು ನಡೆಸಲು ಮಾನ್ಯ ಮುಖ್ಯಮಂತ್ರಿಗಳು 2014-15ನೇ ಅಯವ್ಯಯ ಭಾಷಣದಲ್ಲಿ ಘೋಷಣೆ ಮಾಡಿದ್ದು ಈ ದಿಶೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ದಿನಾಂಕ:12-6-2014ರ ಸುತ್ತೋಲೆಯ ಹೊರಡಿಸಿದೆ. |
| **ಕಂಡಿಕೆ ಸಂಖ್ಯೆ: 152** -ಸ್ತ್ರೀಶಕ್ತಿ ಗುಂಪು / ಒಕ್ಕೂಟಗಳ ಮೂಲಕ ಸ್ಯಾನಿಟರಿ ನ್ಯಾಪ್‌ಕಿನ್ ತಯಾರಿಕಾ ಘಟಕಗಳನ್ನು 50 ತಾಲ್ಲೂಕುಗಳಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ಆವರ್ತಕ ವೆಚ್ಚಕ್ಕಾಗಿ ಪ್ರತಿ ಘಟಕಕ್ಕೆ 1 ವರ್ಷಕ್ಕೆ 6 ಲಕ್ಷ ರೂ.ಗಳಂತೆ ಒಟ್ಟು 3 ಕೋಟಿ ರೂ. ಒದಗಿಸಲಾಗುವುದು. | ಸರ್ಕಾರದ ಆದೇಶ ಸಂಖ್ಯೆ: ಮಮಇ/69/ಮಮಅ/2014,<br>ದಿ: 16-07-14ರಲ್ಲಿ ಯೋಜನೆಯ ಅನುಷ್ಠಾನಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಒಂದು ಘಟಕಕ್ಕೆ ಒಂದು ತಿಂಗಳಿಗೆ ರೂ.50000/- ಒಂದು ವರ್ಷಕ್ಕೆ ರೂ.6.00 ಲಕ್ಷ ಹಾಗೂ 50 ತಾಲ್ಲೂಕುಗಳ ಘಟಕಗಳ ಸ್ಥಾಪನೆ ಹಾಗೂ ತರಬೇತಿ ಸೇರಿದಂತೆ ಒಂದು ವರ್ಷಕ್ಕೆ ರೂ.300.00 ಲಕ್ಷಗಳ ಅವಶ್ಯಕತೆ ಇರುತ್ತದೆ. ಈ ಆವರ್ತಕ ವೆಚ್ಚವನ್ನು ಇಲಾಖೆಯಿಂದ ಒಂದು ವರ್ಷದವರೆಗೆ ಭರಿಸಲಾಗುವುದು. |
| **ಕಂಡಿಕೆ ಸಂಖ್ಯೆ: 153** - ಬಾಲ ನ್ಯಾಯ ಕಾಯ್ದೆ ಅಡಿ ನಡೆಯುತ್ತಿರುವ ಸರ್ಕಾರದ ಬಾಲಮಂದಿರಗಳಲ್ಲಿ ದೀರ್ಘಕಾಲದ ಪುನರ್ವಸತಿಗಾಗಿ ಇರುವ ಅನಾಥ ಹಾಗೂ ನಿರ್ಗತಿಕ ಮಕ್ಕಳಿಗೆ ವಿಮೆ ಸೌಲಭ್ಯ ಒದಗಿಸುವುದರ ಮೂಲಕ ಜೀವನ ಭದ್ರತೆ ಒದಗಿಸಲಾಗುವುದು. ಇದಕ್ಕಾಗಿ 2.50 ಕೋಟಿ ರೂ.ಗಳನ್ನು ಒದಗಿಸಲಾಗುವುದು. | ಈ ಹೊಸ ಯೋಜನೆಯ ರೂಪುರೇಷೆಗಳ ಬಗ್ಗೆ ಯೋಜನಾ ಇಲಾಖೆಯಲ್ಲಿ ಸರ್ಕಾರದ ಕಾರ್ಯದರ್ಶಿಗಳೊಡನೆ ಚರ್ಚಿಸಲಾಗಿದೆ. ಅಂತಿಮ ತೀರ್ಮಾನ ನಿರೀಕ್ಷಿಸಲಾಗಿದೆ. |
| **ಕಂಡಿಕೆ ಸಂಖ್ಯೆ: 154** – ರಾಜ್ಯ ಹಾಗೂ ಭಾರತ ಸರ್ಕಾರದ ಶೇ. 25:75ರ ಅನುದಾನದ ಅನುಪಾತದಲ್ಲಿ 4.23 ಕೋಟಿ ರೂ.ಗಳಲ್ಲಿ ಸ್ನೇಹ ಶಿವಿರ ಕಾರ್ಯಕ್ರಮವನ್ನು 2014-15ನೇ ಸಾಲಿನಲ್ಲಿ ಜಾರಿಗೆ ತರಲಾಗುವುದು. ಈ ಕಾರ್ಯಕ್ರಮದಡಿ, 4 ರಿಂದ 5 ಅಂಗನವಾಡಿ ಕೇಂದ್ರಗಳ ಗುಚ್ಛಗಳಲ್ಲಿ, ಸಾಧಾರಣ ಹಾಗೂ ತೀವ್ರ ಅಪೌಷ್ಠಿಕತೆಯಿಂದ ನರಳುತ್ತಿರುವ ಮಕ್ಕಳ | ಸರ್ಕಾರದ ಆದೇಶ ಸಂಖ್ಯೆ:ಮಮಇ/104/ಐಸಿಡಿ/2014, ದಿನಾಂಕ: 19-06-2014ರ ಮೇರೆಗೆ ಹೆಚ್ಚಿನ ಹೊರೆ ಇರುವ ಜಿಲ್ಲೆಗಳಾದ ಕಲ್ಬುರ್ಗಿ, ಕೋಲಾರ, ಬಳ್ಳಾರಿ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಸ್ನೇಹ ಶಿವಿರ ಕಾರ್ಯಕ್ರಮ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. |

| | |
|---|---|
| ಶುಶ್ರೂಷೆಗಾಗಿ, ಈ ಮಕ್ಕಳ ತಾಯಂದಿರು/ಪೋಷಕರಿಗೆ ಕಡಿಮೆ ವೆಚ್ಚದ ಪೌಷ್ಠಿಕ ಆಹಾರ ತಯಾರಿಸುವುದು/ಉಣಿಸುವುದರ ಬಗ್ಗೆ ಹಾಗೂ ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ 12 ದಿನದ ವಸತಿ ಸಹಿತ ತರಬೇತಿಯನ್ನು ಹೆಚ್ಚಿನ ಅಪೌಷ್ಠಿಕತೆ ಇರುವ ಕರ್ನಾಟಕ ರಾಜ್ಯದ 4 ಜಿಲ್ಲೆಗಳಾದ ಗುಲ್ಬರ್ಗ, ಕೋಲಾರ, ಬಳ್ಳಾರಿ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುವುದು. | |
| **ಕಂಡಿಕೆ ಸಂಖ್ಯೆ: 155** – ಬಹುವಲಯ ಪೌಷ್ಠಿಕ ಕಾರ್ಯಕ್ರಮವನ್ನು, ತಾಯಂದಿರ ಹಾಗೂ ಮಕ್ಕಳ ಅಪೌಷ್ಠಿಕತೆಯನ್ನು ತಡೆಗಟ್ಟಲು ಶೇ. 75:25 ರ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನ ಅನುಪಾತದಲ್ಲಿ 2014–15ನೇ ಸಾಲಿಗೆ ರಾಜ್ಯದ 4 ಹೆಚ್ಚು ಬಾಧಿತರಿರುವ ಜಿಲ್ಲೆಗಳಾದ ಕೋಲಾರ, ಬಾಗಲಕೋಟೆ, ಬಳ್ಳಾರಿ ಹಾಗೂ ಗುಲ್ಬರ್ಗ ಜಿಲ್ಲೆಗಳಲ್ಲಿ 1.55 ಕೋಟಿ ರೂ.ಗಳ ವೆಚ್ಚದಲ್ಲಿ ಹಮ್ಮಿಕೊಳ್ಳಲಾಗುವುದು. | ಸರ್ಕಾರದ ಆದೇಶ ಸಂಖ್ಯೆ: ಮಮಇ/147/ಐಸಿಡಿ/2014, ದಿನಾಂಕ: 12–09–2014ರಲ್ಲಿ ಕರ್ನಾಟಕ ರಾಜ್ಯದ ಹೆಚ್ಚು ಹೊರೆಯಿರುವ 4 ಜಿಲ್ಲೆಗಳಾದ ಕೋಲಾರ, ಬಾಗಲಕೋಟೆ, ಬಳ್ಳಾರಿ ಮತ್ತು ಗುಲಬರ್ಗಾ ಜಿಲ್ಲೆಗಳಲ್ಲಿ ಬಹುವಲಯ ಪೌಷ್ಠಿಕ ಆಹಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. |

## 2015-16ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿರುವ ಕಾರ್ಯಕ್ರಮಗಳ ಅನುಷ್ಠಾನದ ವಿವರ

| ಕ್ರ.ಸಂ. (ಆಯವ್ಯಯ ಭಾಷಣದಲ್ಲಿನ ಕಂಡಿಕೆ ಸಂಖ್ಯೆ) | ಆಯವ್ಯಯದಲ್ಲಿ ಅಳವಡಿಸಲಾದ ಯೋಜನೆಯ ಹೆಸರು | ಆಯವ್ಯಯದಲ್ಲಿ ಒದಗಿಸಲಾದ ಅನುದಾನ (ರೂ. ಲಕ್ಷಗಳಲ್ಲಿ) | ಅನುಷ್ಠಾನಗೊಳಸುತ್ತಿದ್ದರೆ ಅದರ ಪ್ರಸ್ತುತ ಹಂತದ ಕುರಿತು | ನೀಡಲಾದ ಅನುದಾನದಲ್ಲಿ ಬಳಕೆ ಮಾಡಿರುವ ಮೊತ್ತ |
|---|---|---|---|---|
| 1 (173) | ಅಂಗನವಾಡಿ ಕೇಂದ್ರದ ಫಲಾನುಭವಿಗಳ ವಿವರ ತೀವ್ರ ಅಪೌಷ್ಠಿಕತಗೆ ಒಳಗಾದ ಮಕ್ಕಳ ಮಾಹಿತಿ, ಆಹಾರ ವಿತರಣೆ ಭಾಗ್ಯಲಕ್ಷ್ಮಿ ಯೋಜನೆ, ಚೈಲ್ಡ್ ಟ್ರಾಕಿಂಗ್ ಮುಂತಾದ ವಿಷಯಗಳ ವಿದ್ಯುನ್ಮಾನ ಮಾಹಿತಿ ನಿರ್ವಹಣೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿ ಇದಕ್ಕಾಗಿ 2 ಕೋಟಿ ರೂ. ಅನುದಾನ ನೀಡಲಾಗುವುದು. | 200.00 | ಆದೇಶ ಸಂಖ್ಯೆ: ಮಮಇ 255 ಐಸಿಡಿ 2015 ದಿನಾಂಕ: 04.07.2015ರಲ್ಲಿ ಯೋಜನೆಯ ಅನುಷ್ಠಾನಕ್ಕಾಗಿ ಆದೇಶ ಹೊರಡಿಸಲಾಗಿದೆ. ಇಲಾಖಾ ತಾಂತ್ರಿಕ ಸಮಿತಿ ಸಭೆಯಲ್ಲಿ ಯೋಜನೆಯ ಅನುಷ್ಠಾನಕ್ಕೆ ಅನುಮೋದನೆ ನೀಡಿದೆ. | ..... |
| 2 (174) | ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಪ್ರಸ್ತುತ ನೀಡುತ್ತಿರುವ ಮಾಸಿಕ ಗೌರವಧನವನ್ನು ಕ್ರಮವಾಗಿ ರೂ. 500/- ಹಾಗೂ ರೂ. 250/-ರಂತೆ ಹೆಚ್ಚಿಸಲಾಗುವುದು. | 29451.52 | ಆದೇಶ ಸಂಖ್ಯೆ: ಮಮಇ 202 ಐಸಿಡಿ 2015, ದಿನಾಂಕ: 10.06.2015ರಂದು ಆದೇಶ ಹೊರಡಿಸಲಾಗಿದೆ. ಸದರಿ ಕಾರ್ಯಕ್ರಮವು ಇಲಾಖೆಯ ಮುಂದುವರೆದ ಕಾರ್ಯಕ್ರಮವಾಗಿರುತ್ತದೆ. | 21557.50 |
| 3 (175) | ಆಸಿಡ್ ದಾಳಿಗೊಳಗಾದ ಮಹಿಳೆಯರಿಗೆ ಆರ್ಥಿಕ ಪರಿಹಾರ ನೀಡಲು ರಾಜ್ಯ ಮಟ್ಟದಲ್ಲಿ ಮಹಿಳೆಯರ ನಿಧಿಯನ್ನು ಸ್ಥಾಪಿಸಲು 5 ಕೋಟಿ ರೂ ನೀಡಲಾಗುವುದು. ಈ ನಿಧಿಯಿಂದ ದೌರ್ಜನ್ಯಕ್ಕೊಳಗಾದ ಮಹಿಳೆಯರ ತುರ್ತು ಪರಿಹಾರಕ್ಕಾಗಿ ಪ್ರಕರಣಕ್ಕೆ ಗರಿಷ್ಠ 2 ಲಕ್ಷ ರೂ. ಪರಿಹಾರ ಮತ್ತು ದೌರ್ಜನ್ಯದಿಂದ ಮೃತಪಟ್ಟಲ್ಲಿ ಕುಟುಂಬ ಸದಸ್ಯರಿಗೆ 1 ಲಕ್ಷ ರೂ. ಮರಣ ಪರಿಹಾರ ನೀಡಲಾಗುವುದು. | 500.00 | ಆದೇಶ ಸಂಖ್ಯೆ: ಮಮಇ 27 ರಾಮಆ 2015ದಿನಾಂಕ:31.08.2015ರಂದು ಯೋಜನೆಯ ಅನುಷ್ಠಾನಕ್ಕಾಗಿ ಮಂಜೂರಾತಿ ದೊರೆತಿದೆ | ರೂ. 150.00 ಲಕ್ಷಗಳನ್ನು ದಿನಾಂಕ: 09-12-2015ರಂದು ಜಿಲ್ಲೆಗಳಿಗೆ ಮರುಹಂಚಿಕೆ ಮಾಡಲಾಗಿದೆ. |
| 4 (176) | ಅಂಗನವಾಡಿ ಕೇಂದ್ರಗಳಲ್ಲಿ ಸೌರಶಕ್ತಿ ದೀಪಗಳನ್ನು ಮತ್ತು ಫ್ಯಾನ್‌ಗಳನ್ನು ಒದಗಿಸಲು 5 ಕೋಟಿ ರೂ. ಅನುದಾನ ನೀಡಲಾಗುವುದು. | 500.00 (ಇಂಧನ ಇಲಾಖೆಯ ಅನುದಾನದಲ್ಲಿ ವೆಚ್ಚ ಭರಿಸಲು ಆರ್ಥಿಕ ಇಲಾಖೆಯು ತಿಳಿಸಿರುತ್ತದೆ) | ರೂ. 500.00 ಲಕ್ಷಗಳ ಮೊತ್ತವನ್ನು ಕ್ರೇಡಲ್ ಸಂಸ್ಥೆಗೆ ಬಿಡುಗಡೆ ಮಾಡುವಂತೆ ಇಂಧನ ಇಲಾಖೆಗೆ ಪತ್ರ ಬರೆಯಲಾಗಿದೆ. ದಿನಾಂಕ: 17-02-2016ರಂದು ಟೆಂಡರ್ ಪ್ರಕಟಣೆಯನ್ನು | ----- |

| | | | | |
|---|---|---|---|---|
| | | | ಅನುಮೋದಿಸಿದ್ದು ದಿನಾಂಕ: 10-03-2016ಕ್ಕೆ ಟೆಂಡರ್ ಪ್ರಕ್ರಿಯೆಯನ್ನು ಅಂತಿಮಗೊಳಿಸಲಾಗುವುದು. | |
| 5<br>(177) | ಹೆಣ್ಣು ಮಕ್ಕಳ ಶೋಷಣೆ ತಡೆ, ಬಾಲ್ಯ ವಿವಾಹ ನಿಷೇಧ, ಅಪೌಷ್ಠಿಕತೆಯ ನಿವಾರಣೆ, ಸಮಾಜದಲ್ಲಿ ಸೂಕ್ತ ಸ್ಥಾನಮಾನ ಮುಂತಾದ ಅಂಶಗಳನ್ನು ಒಳಗೊಂಡ ಹೆಣ್ಣು ಮಕ್ಕಳ ನೀತಿಯನ್ನು ರೂಪಿಸಲಾಗುವುದು. | ----- | ಸರ್ಕಾರದ ಆದೇಶ ಸಂಖ್ಯೆ: ಮಮಇ 90 ಮಭಾಬ 2015(ಭಾ1), ದಿನಾಂಕ: 10.08.2015ರಲ್ಲಿ ರಾಜ್ಯ ಮಟ್ಟದ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ಸಭೆಗಳನ್ನು ನಡೆಸಿ ನೀತಿಯ ಕರಡನ್ನು ಸಿದ್ಧಪಡಿಸಿರುತ್ತಾರೆ.<br>ನೀತಿಯ ಕರಡನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಸಂಗ್ರಹಿಸಲು ದಿನಾಂಕ: 10-02-2016ರಂದು ಸರ್ಕಾರದ ಅನುಮೋದನೆ ಕೋರಲಾಗಿದ್ದು, ಮಾದರಿ ಚುನಾವಣಾ ನೀತಿ ಸಂಹಿತೆ ಪೂರ್ಣಗೊಂಡ ನಂತರ ಮುಂದಿನ ಕ್ರಮ ಜರುಗಿಸಲಾಗುವುದು. | ----- |
| 6<br>(179) | ವಿಜಯಪುರದಲ್ಲಿ ಶ್ರೀ ನಿಡುಮಾಮಿಡಿ ಮಠದ ಆಶ್ರಯದಲ್ಲಿ ಸ್ಥಾಪಿಸಿರುವ ಮಹಿಳಾ ಸಾಧನಾಶ್ರಮಕ್ಕೆ ಕಟ್ಟಡ ನಿರ್ಮಾಣ ಹಾಗೂ ಸೌಲಭ್ಯಗಳನ್ನು ಒದಗಿಸಲು 2 ಕೋಟಿ ರೂ.ಗಳನ್ನು ನೀಡಲಾಗುವುದು. | 200.00 | ಸರ್ಕಾರದ ಆದೇಶ ಸಂಖ್ಯೆ: ಮಮಇ 83 ಮಮಅ 2015 ದಿನಾಂಕ: 11.06.2015ರಲ್ಲಿ ಯೋಜನೆಯ ಅನುಷ್ಠಾನಕ್ಕಾಗಿ ಮಂಜೂರಾತಿ ದೊರೆತಿದೆ. | 50.00 |